**ದಿನಾಂಕಃ 06-11-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ಶ್ರೀ ಎಂ.ಎನ್. ಆರೋಪಿ ಪರ** ವಕೀಲರಿಂದ **:**

ಆರೋಪಿ ಯಾವ ವರ್ಷ ಅಡಿಕೆ ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿ 2023 ಎಂದು ನುಡಿಯುತ್ತಾರೆ. ಯಾವ ತಿಂಗಳು ಮತ್ತು ದಿನಾಂಕದಂದು ನಿಮ್ಮ ಬಳಿ ವ್ಯಾಪಾರ ಮಾಡಿರುತ್ತಾರೆಂದರೆ ಸಾಕ್ಷಿ ದಿನಾಂಕ ಗೊತ್ತಿರುವುದಿಲ್ಲ, ಆದರೆ 12ನೇ ತಿಂಗಳು ಎಂದು ನುಡಿಯುತ್ತಾರೆ. ಸದರಿ 12ನೇ ತಿಂಗಳಿನಲ್ಲಿ ವ್ಯಾಪಾರ ಆಗಿದ್ದ ಸಂಬಂಧ ಬರವಣಿಗೆ ಏನಾದರೂ ಆಗಿರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಕೆ.ಜಿ. ಲೆಕ್ಕದಲ್ಲಿ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ವರ್ಷದ ಲೆಕ್ಕದಂತೆ ಎಂದು ನುಡಿಯುತ್ತಾರೆ. ನಿಮ್ಮ ಮತ್ತು ನಿಮ್ಮ ತಂದೆಯ ಹೆಸರಿನಲ್ಲಿ ಯಾವುದಾದರೂ ಪಹಣಿ ಇದೆಯಾ ಎಂದರೆ ಸಾಕ್ಷಿ ನನ್ನ ಮತ್ತು ನನ್ನ ತಂದೆಯವರ ಹೆಸರಿನಲ್ಲಿ ಇರುವುದಿಲ್ಲ ಆದರೆ ನನ್ನ ತಾತನವರ ಹೆಸರಿನಲ್ಲಿ ಇರುತ್ತದೆಂದು ನುಡಿಯುತ್ತಾರೆ. ಸದರಿ ನಿಮ್ಮ ತಾತನವರ ಹೆಸರಿನಲ್ಲಿರುವ ಜಮೀನಿನ ಮೇಲೆ ಕೇಸು ಇದೆಯೇ ಎಂದರೆ ಸಾಕ್ಷಿ ಈ ಹಿಂದೆ ಇತ್ತು ಈಗ ತೀರ್ಮಾನ ಆಗಿರುತ್ತದೆಂದು ನುಡಿಯುತ್ತಾರೆ. ಯಾರ ಯಾರ ನಡುವೆ ಕೇಸು ಇತ್ತು ಎಂದರೆ ಸಾಕ್ಷಿ ನನ್ನ ತಾತನವರ ಅಣ್ಣ ತಮ್ಮಂದಿರ ನಡುವೆ ಕೇಸು ಇತ್ತು ಎಂದು ನುಡಿಯುತ್ತಾರೆ. ನಿಮ್ಮ ತಾತನವರಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಎಂದರೆ ಸಾಕ್ಷಿ 3 ಜನ ಎಂದು ನುಡಿಯುತ್ತಾರೆ. ವಿಭಾಗ ಆಗಿರುತ್ತದೆಯಾ ಎಂದರೆ ಸಾಕ್ಷಿ ಹೌದು ನ್ಯಾಯಾಲಯದಲ್ಲಿ ಡಿಕ್ರಿ ಆಗಿರುತ್ತದೆಂದು ನುಡಿಯುತ್ತಾರೆ. ಎಷ್ಟು ಎಕರೆ ಬಂದಿರುತ್ತದೆಂದರೆ ಸಾಕ್ಷಿ ಒಬ್ಬೊಬ್ಬರಿಗೆ ಎರಡುವರೆ ಎಕರೆ ಎಂದು ನುಡಿಯುತ್ತಾರೆ.

2. ಒಂದು ಎಕರೆಯಲ್ಲಿ ಎಷ್ಟು ಅಡಿಕೆ ಗಿಡಗಳನ್ನು ಹಾಕಬಹುದು ಎಂದರೆ ಸಾಕ್ಷಿ 900 ಎಂದು ನುಡಿಯುತ್ತಾರೆ. ಒಂದು ಎಕರೆಗೆ 200-300 ಅಡಿಕೆ ಗಿಡಗಳನ್ನು ಮಾತ್ರ ಹಾಕಬಹುದು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಎಷ್ಟು ವರ್ಷದ ಅಡಿಕೆ ಗಿಡಗಳು ಇದೆ ಎಂದರೆ ಸಾಕ್ಷಿ 20 ವರ್ಷ ಎಂದು ನುಡಿಯುತ್ತಾರೆ. ಎಷ್ಟು ಟನ್ ಗೆ ವ್ಯಾಪಾರ ಆಗಿತ್ತು ಎಂದರೆ ಸಾಕ್ಷಿ ನಾವು ಬೆಳೆ ಲೆಕ್ಕದಲ್ಲಿ ಕೊಟ್ಟಿರುತ್ತೇವೆಂದು ನುಡಿಯುತ್ತಾರೆ. ನಿಮ್ಮ ತಾತನವರ ಜಮೀನು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಕೊಟ್ಟಿರುವುದಿಲ್ಲ ಕೊಡುತ್ತೇನೆಂದು ನುಡಿಯುತ್ತಾರೆ.

3. ಆರೋಪಿಯು ಅಡಿಕೆ ವ್ಯಾಪಾರ ಮಾಡುವ ಸಂಬಂಧ ದಾಖಲೆಗಳು ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಹತ್ತಿರ ಅಡಿಕೆ ಪಡೆದ ಬಗ್ಗೆಯೂ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸಾಕ್ಷಿ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಕುದೂರು ಗ್ರಾಮದಲ್ಲಿ ಸುಮಾರು ಏರಿಯಾಗಳು ಇದ್ದು ಒಂದೊಂದು ಏರಿಯಾಗೂ ಒಂದೊಂದು ಹೆಸರು ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಯು ಯಾವ ಗ್ರಾಮದ ವಾಸಿ ಎಂದರೆ ಸಾಕ್ಷಿ ಹೆಬ್ಬಳಲು ಗ್ರಾಮ ಎಂದು ನುಡಿಯುತ್ತಾರೆ. ಸದರಿ ಹೆಬ್ಬಳಲು ಗ್ರಾಮ ಹೊರತು ಪಡಿಸಿ ಬೇರೆ ಎಲ್ಲಾ ವಾಸ ಇದ್ದಿರಲಿಲ್ಲವಾ ಎಂದರೆ ಸಾಕ್ಷಿ ಕುದೂರಿನಲ್ಲೂ ಇದ್ದರು ಎಂದು ನುಡಿಯುತ್ತಾರೆ. ಕುದೂರಿನಲ್ಲಿ ಯಾವ ಏರಿಯಾದಲ್ಲಿ ವಾಸ ಇದ್ದರು ಎಂದರೆ ಸಾಕ್ಷಿ ಏರಿಯಾ ಗೊತ್ತಿರುವುದಿಲ್ಲ ಆದರೆ ದೇವಸ್ಥಾನದ ಹಿಂಭಾಗ ಇದ್ದರು ಎಂದು ನುಡಿಯುತ್ತಾರೆ. ಆರೋಪಿಯು ರಾಮಮಂದಿರ ರಸ್ತೆಯಲ್ಲಿ ವಾಸ ಇರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಹೇಳುವಂತೆ ಆರೊಪಿಯು ಹೆಬ್ಬಳಲು ಗ್ರಾಮದಲ್ಲಿ ವಾಸ

ಇರುವುದಿಲ್ಲ, ಕುದೂರಿನಲ್ಲಿ ವಾಸ ಇರುವುದು ಎಂದರೆ ಸಾಕ್ಷಿ ಎರಡು ಕಡೆಯೂ ವಾಸ ಇರುತ್ತಾರೆಂದು ನುಡಿಯುತ್ತಾರೆ. ಸದರಿ ಹೆಬ್ಬಳಲು ಗ್ರಾಮದಲ್ಲಿ ವಾಸ ಇದ್ದರು ಎಂಬುದರ ಬಗ್ಗೆ ದಾಖಲಾತಿಗಳು ಇವೆಯೇ ಎಂದರೆ ಸಾಕ್ಷಿ ಕೊಡುತ್ತೇನೆಂದು ನುಡಿಯುತ್ತಾರೆ. ಸದರಿ ಹೆಬ್ಬಳಲು ಗ್ರಾಮದಲ್ಲಿ ವಾಸವಿರುವ ಮನೆಯ ನಂಬರ ಮತ್ತು ಚಕ್ಕುಬಂದಿ ಗೊತ್ತೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಖುದ್ದಾಗಿ ನೋಡಿರುವುದಿಲ್ಲ ಎಂದರೆ ಸಾಕ್ಷಿ ನೋಡಿರುತ್ತೇನೆಂದು ನುಡಿಯುತ್ತಾರೆ. ಯಾವಾಗ ನೋಡಿರುತ್ತೀರಾ ಎಂದರೆ ಸಾಕ್ಷಿ 2023 ಎಂದು ನುಡಿಯುತ್ತಾರೆ. ಯಾವ ತಿಂಗಳಿನಲ್ಲಿ ಹೋಗಿರುತ್ತೀರಿ ಎಂದರೆ ಸಾಕ್ಷಿ ಈಗ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ.

4. ಕಾನೂನು ತಿಳುವಳಿಕೆಯಲ್ಲಿ ಆರೋಪಿಯು ಕುದೂರಿನ ಯಾವ ಏರಿಯಾದಲ್ಲಿ ವಾಸ ಇದ್ದಾರೆಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೇಳಿರುತ್ತೇನೆಂದು ನುಡಿಯುತ್ತಾರೆ. ನಿಮ್ಮ ಕಾನೂನು ತಿಳುವಳಿಕೆಯಲ್ಲಿ ಆರೋಪಿಯ ವಿಳಾಸ ರಾಮಮಂದಿರ ರಸ್ತೆ ಎಂದು ಬರೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ 1ನೇ ಬ್ಲಾಕ್ ಎಂದು ಬರೆದಿರುತ್ತದೆಂದು ನುಡಿಯುತ್ತಾರೆ. ಆರೋಪಿಯ ಮೊಬೈಲ್ ನಂಬರ್ ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ಈಗ ನಂಬರನ್ನು ಬ್ಲಾಕ್ ಮಾಡಿರುತ್ತಾರೆಂದು ನುಡಿಯುತ್ತಾರೆ. ಯಾರ ನಂಬರ್ ಬ್ಲಾಕ್ ಮಾಡಿರುತ್ತಾರೆಂದರೆ ಸಾಕ್ಷಿ ನನ್ನ ಮೊಬೈಲ ನಂಬರ್ ಎಂದು ನುಡಿಯುತ್ತಾರೆ. ಕಾನೂನು ತಿಳುವಳಿಕೆಯಲ್ಲಿ ಆರೋಪಿಯ ಮೊಬೈಲ್ ನಂಬರನ್ನು ನಮೂದಿಸಿ ಕಳುಹಿಸಲು ನಿಮಗೆ ತೊಂದರೆ ಇದ್ದಿರಲಿಲ್ಲ ಎಂದರ ಸಾಕ್ಷಿ ಬೇರೆ ಬೇರೆ ನಂಬರ್ ಉಪಯೋಗಿಸುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿಯು ಬೇರೆ ಬೇರೆ ಮೊಬೈಲ್ ನಂಬರ್

ಉಪಯೋಗಿಸುತ್ತಿದ್ದರು ಎಂದು ನಿಮಗೆ ಹೇಗೆ ಗೊತ್ತು ಎಂದರೆ ಸಾಕ್ಷಿ ಸ್ವೀಚ್ ಆಫ್ ಮಾಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಬೇರೆ ನಂಬರುಗಳು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

5. ವರ್ಷಕ್ಕೆ ಅಡಿಕೆ ಬೆಳೆಯಲ್ಲಿ ನೀವು ಎಷ್ಟು ಆದಾಯ ಪಡೆಯುತ್ತೀರಿ ಎಂದರೆ ಸಾಕ್ಷಿ 12-13 ಲಕ್ಷ ಎಂದು ನುಡಿಯುತ್ತಾರೆ. 12-13 ಲಕ್ಷ ಆದಾಯ ಇರುವ ಬಗ್ಗೆ ಬ್ಯಾಂಕ್ ಟ್ರಾನಜಾಕ್ಷನ್ ಇದೆಯಾ ಎಂದರೆ ಸಾಕ್ಷಿ ಇಲ್ಲ ನಮಗೆ ನಗದು ರೂಪದಲ್ಲಿ ಕೊಡುತ್ತಿದ್ದರು ಎಂದು ನುಡಿಯುತ್ತಾರೆ. ಯಾವ ಯಾವ ವರ್ಷಗಳಲ್ಲಿ ನಗದು ಕೊಟ್ಟಿರುತ್ತಾರೆಂದರೆ ಸಾಕ್ಷಿ ಎಲ್ಲಾ ವರ್ಷವೂ ಎಂದು ನುಡಿಯುತ್ತಾರೆ. ನಿಮ್ಮ ಆದಾಯ ತೆರಿಗೆಯಲ್ಲಿ ಅಡಿಕೆ ಬೆಳೆಯಿಂದ 12-13 ಲಕ್ಷ ಆದಾಯ ಇದೆ ಎಂದು ತೋರಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಉದ್ದೇಶ ಪೂರ್ವಕವಾಗಿ ಆರೋಪಿಗೆ ನೋಟಿಸ್ ಜಾರಿಯಾಗಬಾರದು ಎಂಬ ಉದ್ದೇಶದಿಂದ ಆರೋಪಿಯ ಸರಿಯಾದ ವಿಳಾಸ ನಮೂದು ಮಾಡದೇ ತಪ್ಪಾದ ವಿಳಾಸ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಗಿರಿಯಪ್ಪ ನಿಮಗೆ ಏನಾಗಬೇಕು ಎಂದರೆ ಸಾಕ್ಷಿ ಚಿಕ್ಕಪ್ಪ ಎಂದು ನುಡಿಯುತ್ತಾರೆ. ಸದರಿ ಗಿರಿಯಪ್ಪ ನವರೂ ಸಹ ಆರೋಪಿಯ ವಿರುದ್ದ ರೂ.9 ಲಕ್ಷ ಹಣ ಕೊಡಬೇಕು ಎಂದು ಚೆಕ್ ಕೇಸು ಹಾಕಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಮತುತ ಸದರಿ ಗಿರಿಯಪ್ಪನವರು ಒಟ್ಟಿಗೆ ವ್ಯಾಪಾರ ಮಾಡಿರುತ್ತೀರಾ ಅಥವಾ ಬೇರೆ ಬೇರೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಬೇರೆ ಬೇರೆ ಆದರೆ ಒಂದೇ ದಿನ ವ್ಯಾಪಾರ ಮಾಡಿರುತ್ತೇವೆಂದು ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯ ನೀಡಲಾಯಿತು.**

ಪಿ.ಡಬ್ಲೂ-01

ಓ. ಹೇ. ಕೇ. ಸ. ಇ. ಎ.  ಓಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.